



# ಒತ್ತಿನೆಣೆ ಅಂದಕ್ಕಿಲ್ಲ ಎಣೆ!

■ ಡಾ. ಎನ್. ಸ್ವಾತಿ, ಉಡುಪಿ

ಕರಾವಳಿಯ ತುರಾಯಿಗಳಲ್ಲಿ ಕಡಲ ಕಿನಾರೆಗಳೂ ಸೇರಿವೆ. ಇಂಥ ಕಿನಾರೆಗಳಲ್ಲೊಂದು ಒತ್ತಿನೆಣೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೈಂದೂರಿನಿಂದ 2 ಕಿ.ಮೀ. ದೂರದಲ್ಲಿದೆ ಒತ್ತಿನೆಣೆ. ಇದು 'ನೆಣೆ'ಯಂತೆ ಕಾಣುವುದರಿಂದ ಒತ್ತಿನೆಣೆ ಎಂಬ ಹೆಸರು ಬಂತೆಂಬುದು ಪ್ರತೀತಿ. ಕಡಲ ಕಿನಾರೆಗೆ ಹೊಂದಿಕೊಂಡಂತೆಯೇ ಸೋಮೇಶ್ವರ ದೇವಸ್ಥಾನವಿದೆ. ಸಮೀಪದ ಗುಡ್ಡದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ರೆಸಾರ್ಟ್ ವ್ಯವಸ್ಥೆ ಮಾಡಲಾಗಿದೆ. ಗುಡ್ಡದ ಮೇಲಿಂದ ಕಾಣುವ ಸೂರ್ಯಾಸ್ತದ ಸೌಂದರ್ಯ ಮನಮೋಹಕ.

ನೋಡಿದಷ್ಟೂ ಉಳಿಯುವ ಸಮುದ್ರದ ಅಗಾಧ ಜಲರಾಶಿ, ಮನಸ್ಸಿಗೆ ಮುದ ನೀಡುವ ವಾತಾವರಣ, ಸಂಜೆಯ ಸುಂದರ ಸೂರ್ಯಾಸ್ತದ ಸೊಬಗು – ಒತ್ತಿನೆಣೆಯ ಆಕರ್ಷಣೆಗಳು ಒಂದೆರಡಲ್ಲ.

ಹಗಲು ಕರಗತೊಡಗಿದಂತೆ ಬೀಚ್‌ನಲ್ಲಿ ಪ್ರವಾಸಿಗರ ಕಲರವ ಹೆಚ್ಚಾಗುತ್ತದೆ. ಕೆಲವರಿಗೆ ಅಲೆಗಳೊಂದಿಗೆ ಆಡುವ ತವಕ. ಮತ್ತೆ ಕೆಲವರಿಗೆ ಮರಳಿನಲ್ಲಿ ಹೆಜ್ಜೆ ಹಾಕುವ ಉತ್ಸಾಹ. ನಿರಾಳವಾಗಿ ಕಾಲು ಚಾಚಿ ಕೂತು ನೀರಾಟದ ಜೊತೆಗೆ ಜನರ ಆಟವನ್ನು ಕಣ್ತುಂಬಿಕೊಳ್ಳುವವರೂ ಸಾಕಷ್ಟು ಮಂದಿ. ಕೈಯಲ್ಲಿ ಮೊಬೈಲೋ ಕೊರಳಲ್ಲಿ ಕ್ಯಾಮೆರಾವೋ ಇರುವಾಗ ಈ ಸಂತಸದ ಕ್ಷಣಗಳು ಸೆರೆಯಾಗದಿರುವುದು ಸಾಧ್ಯವೇ?

ಒತ್ತಿನೆಣೆ ನೋಡಲು ಬಂದವರು ಬೈಂದೂರಿನಲ್ಲಿನ ಸೋಮೇಶ್ವರ ದೇಗುಲಕ್ಕೆ ಭೇಟಿಕೊಡಬಹುದು. ಮರವಂತೆ ಬೀಚ್, ಮುರ್ಡೇಶ್ವರ, ಕೊಲ್ಲೂರುಗಳು ಕೂಡ ಇಲ್ಲಿಗೆ ಸಮೀಪ. ಕೊಲ್ಲೂರು ಮೂಕಾಂಬಿಕಾ ದೇವಾಲಯದಿಂದ 2 ಕಿ.ಮೀ. ದೂರದಲ್ಲಿರುವ ಅರಶಿನಗುಂಡಿ ಜಲಪಾತವೂ ನಿಮ್ಮ ಪ್ರೇಕ್ಷಣೀಯ ಸ್ಥಳಗಳ ಪಟ್ಟಿಯಲ್ಲಿರಲಿ.